**ಸಾಕ್ಷಿಯನ್ನು ದಿಃ 22.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ ಎ ಎಸ್ ವಕೀಲರಿಂದಃ**

1.ನಾನುಗಾರೆ ಕೆಲಸವನ್ನು ಚಾಮರಾಜ ನಗರ ಸರ್ಕಲ್ ನಲ್ಲಿ ಯಾರು ಕರೆಯುತ್ತಾರೋ ಅವರ ಬಳಿ ಹೋಗಿ ಮಾಡುತ್ತೇನೆ. ಇವತ್ತು ರಜೆ ಹಾಕಿ ಬಂದಿದ್ದೇನೆ ಎಂದರೆ ಸರಿಯಲ್ಲ. ಈಗ ನನಗೆ ಕೆಲಸ ಮಾಡಲು ಆಗುತ್ತಿಲ್ಲ. ಗಾರೆ ಕೆಲಸ ಮಾಡುತ್ತಿದ್ದ ಬಗ್ಗೆ ಕಾರ್ಮಿಕ ಇಲಾಖೆಯಿಂದ ದಾಖಲೆ ಹಾಜರುಪಡಿಸಿಲ್ಲ. ನನಗೆ ವೃತ್ತಿ ಹಾಗೂ ವರಮಾನದಲ್ಲಿ ನಷ್ಟ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯಲಿಲ್ಲ ನಾನೇ ದುಡಿಯಬೇಕು ಎನ್ನುತ್ತಾರೆ. ನಾನು ಉದ್ದೇಶಪೂರ್ವಕವಾಗಿ ವೃತ್ತಿ ಹಾಗೂ ವರಮಾನದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂರೆ ಸರಿಯಲ್ಲ.

2. ಮಾದೇಶ ಮತ್ತು ವಿಜಯ್ ಕುಮಾರ್ ಎಂಬುವವರು ನಾನು ಚಲಾಯಿಸುತ್ತಿದ್ದ ಮೋಟಾರು ವಾಹನದಲ್ಲಿ ಹಿಂಬದಿ ಸವಾರಾಗಿದ್ದರಟು ಎಂದರೆ ಸರಿ.ಅಪಘಾತದ ನಂತರ ನಾವು ಮೈಸೂರು ಕೆ ವಿ ಸಿ ಆಸ್ಪತ್ರೆಯಲ್ಲಿ ದಾಖಲಾಗಿದ್ದೆವು ಎಂದರೆ ಸರಿ. ಕೆ ವಿ ಸಿ ಆಸ್ಪತ್ರೆಯ ದಾಖಲೆಗಳಲ್ಲಿ ನಿಪಿ.6 ರಲ್ಲಿ ಮತ್ತು ಆರ್ ಟಿ ಎ ಹಿಸ್ಟರಿ ಎಮ್ ಎಲ್ ಸಿ ರಿಜಿಸ್ಟರ್ ಗಳಲ್ಲಿ ನಾನು ಹಿಂಬದಿ ಸವಾರನಾಗಿದ್ದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ನಾನೇ ಗಾಡಿ ಚಲಾಯಿಸುತ್ತಿದ್ದ ಎಂದು ಸುಳ್ಳಾಗಿ ಪ್ರಥಮ ವರ್ತಮಾನ ವರದಿ ಹಾಗೂ ಅಂತಿಮ ವರದಿಯಕಲ್ಲಿ ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ನಾನು ಹಿಂಬದಿ ಸವಾರಾನಾಗಿದ್ದೆ ಎಂದು ನಮೂದಿಸಿದ್ದಕ್ಕೆ ನಾನು ತಕರಾರು ಸಲ್ಲಿಸಿಲ್ಲ. ಅಪಘಾತದ ಸಮಯದಲ್ಲಿ ನನಗೆ ಚಾಲನ ಪರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಲನ ಪರವಾನಗಿ ಇದ್ದಿದ್ದರೆ ಹಾಜರುಪಡಿಸಬಹುದಿತ್ತು ಎಂದರೆ ಅದು ವಾಹನದಲ್ಲಿಯೇ ಬಿಟ್ಟು ಹೋಗಿದೆ ಎನ್ನುತ್ತಾರೆ. ಆರ್ ಟಿ ಒ ಇಂದ ಬಿ ಎಕ್ಸ್ ಟ್ರಾಕ್ಟ್ ನ್ನು ಹಾಜುರಪಡಿಸಬಹುದಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮೋಟಾರು ಸೈಕಲ್ ಗೆ

ವಿಮೆ ಇತ್ತು ಅದನ್ನು ಹಾಜುರಪಡಿಸಿಲ್ಲ ಎಂದರೆ ಅದು ಬೈಕ್ ನಲ್ಲಿಯೇ ಬಿಟ್ಟು ಹೋಗಿದೆ ಎನ್ನುತ್ತಾರೆ.

3. ನಾವು ರಸ್ತೆಯ ನಿಯಮ ಉಲ್ಲಂಘಿಸಿ ನಾಲ್ಕು ಜನರು ಬೈಕ್ ನಲ್ಲಿ ಹೋಗಿ ಲಾರಿಗೆ ಡಿಕ್ಕಿ ಪಡಿಸಿದ್ದೇವೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಲಾರಿಯ ಮೇಲೆ ಸುಳ್ಳು ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಲಾರಿಯ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಪೋಲಿಸರೊಂದಿಗೆ ಷಾಮಿಲಾಗಿ ಲಾರಿಯ ಮೇಲೆ ಸುಳ್ಳು ದೊಷರೋಪಣ ಪಟ್ಟಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಡಿಸ್ಚಾರ್ಜ್ ಸಮ್ಮರಿಯಲ್ಲಿ ಕೆಲಸ ಮುಂದುವರಿಸಬಾದು ಎಂದು ನಮೂದಗಿಲ್ಲ ಎಂದರೆ ಸರಿ.ನನಗೆ ಡಾಃ ನಂದೀಶ್ ಕುಮಾರ್ ಚಿಕಿತ್ಸೆ ನೀಡಿದ್ದಾರೆ. ಗಾಯಗಳು ವಾಸಿಯಾದ ನಂತರವೇ ಬಿಡುಗಡೆಗೊಳಿಸಿದ್ದಾರೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜುರಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತ ಸಮಯದಲ್ಲಿ ನಾವು ಹೆಲ್ಮೆಟ್ ಧರಿಸಿರಲ್ಲಿ ಎಂದರೆ ಸರಿಯಲ್ಲ. ಪೋಲೀಸ್ ದಾಖಲೆಗಳಲ್ಲಿ ಹೆಲ್ಮೆಟ್ ಹಾಕಿದ ಬಗ್ಗೆ ನಮೂದಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಯಾವುದೇ ಅಂಗನ್ಯೂನತೆ ಆಗಿಲ್ಲ ಎಂದರೆ ಸರಿಯಲ್ಲ.

4. ನಾನು ಹಿಂಬದಿ ಸವಾರನಾಗಿದ್ದ ಕಾರಣ ಪರಿಹಾರಕ್ಕೆ ಭಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿತದ್ದೇನೆ ಎಂದೆ ಸರಿಯಲ್ಲ. ಕಚ್ಚಾ ನಕ್ಷೆಯ ಪ್ರಕಾರವು ಸಹ ರಸ್ತೆಯ ನಿಯಮ ಉಲ್ಲಂಘಿಸಿ ನಾನೇ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವೃತ್ತಿ ಮುಂದುವರಿಸಿದ್ದು ಆದಾಯ ಇದ್ದರು ಪರಿಹಾರಕಾಕಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಔಷದಿ ಬಿಲ್ಲುಗಳನ್ನು ನನ್ನ ಅವಶ್ಯಕತೆಗೊಸ್ಕರ ಸೃಪಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.